**ದಿನಾಂಕ 20.11.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಲಾಗಿದೆ ಪಾಟೀಸವಾಲು ಮಾಡಲು 12 ನೇ ಪ್ರತಿವಾದಿಗೆ ಅನುಮತಿಸಲಾಗಿದೆ.

**12 ನೇ ಪ್ರತಿವಾದಿಯ ಪರವಾಗಿ ಪಾಟೀ ಸವಾಲುಃ ಶ್ರೀ ಆರ್.ಎಲ್. ವಕೀಲರಿಂದ**

3 ನೇ ಪ್ರತಿವಾದಿ ನನ್ನ ಮೈದುನ. 9 ನೇ ಪ್ರತಿವಾದಿ 3 ನೇ ಪ್ರತಿವಾದಿಯ ಮಗಳು. 9 ನೇ ಪ್ರತಿವಾದಿಯ ಗಂಡ ಅಶ್ವತ್ ರವರ ಅಣ್ಣ 12 ನೇ ಪ್ರತಿವಾದಿ ಎಂದರೆ ಸರಿ. ನಾವು ಈಗ ವಾಸ ಇರುವ ಮನೆ ನಮಗೆ ಭಾಗ ಬಂದ ನಂತರ ಮನೆ ಕಟ್ಟಿಕೊಂಡು ಆ ಜಾಗದಲ್ಲಿ ವಾಸ ಇದ್ದೇವೆ ಎಂದರೆ ಸರಿ. ನಾವು ವಾಸ ಇರುವ ಮನೆ ಕಟ್ಟುವಾಗ ನನ್ನ ಗಂಡ ಲೇಟ್ ಮಹದೇವಯ್ಯ ಮತ್ತು 4 ನೇ ಪ್ರತಿವಾದಿಯ ಗಂಡ ಸೋಮಶೇಖರ 15 ಸಾವಿರ ಹಣ ಪಡೆದು 12 ನೇ ಪ್ರತಿವಾದಿಗೆ ಗೊಂಧೀಮಲ್ಲೇನಹಳ್ಳಿ ಜಮೀನಿಗೆ ಕರಾರು ಪತ್ರ ಬರೆದುಕೊಟ್ಟಿರುವ ವಿಚಾರ ನನಗೆ ಗೊತ್ತಿದೆ ಆ ಜಮೀನಿನ ಸರ್ವೆ ನಂಬರ್ 63/1 ಎಂದರೆ ಸರಿ. 4 ನೇ ಪ್ರತಿವಾದಿಯ ಗಂಡ ಸೋಮಶೇಖರ 1994 ರಲ್ಲಿ ತನಗೆ ಬಂದ ಪಾಲಿನ ಜಮೀನನ್ನು 12 ನೇ ಪ್ರತಿವಾದಿಯ ಹೆಸರಿಗೆ ಮತ್ತೊಂದು ಕರಾರು ಪತ್ರ ಬರೆದು ಕೊಟ್ಟಿರುವ ವಿಚಾರ ನನಗೆ ಗೊತ್ತಿದೆ ಗೊಂಧೀಮಲ್ಲೇನಹಳ್ಳಿಯಲ್ಲಿ ನಮ್ಮ ಕುಟುಂಬಕ್ಕೆ 1 ಎಕರೆ 15 ಗುಂಟೆ ಇದೆ ಅದರ ಸರ್ವೆ ನಂಬರ್ ಗಳು ನನಗೆ ಗೊತ್ತಿಲ್ಲ. ಈ ಜಮೀನು ಬಿಟ್ಟರೆ ಗೊಂಧೀಮಲ್ಲೇನಹಳ್ಳಿಯಲ್ಲಿ ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ಜಮೀನು ಇಲ್ಲ. ನನ್ನ ಗಂಡ ಮಹದೇವಯ್ಯ ಜೀವಂತ ಇದ್ದಾಗ 12 ನೇ ಪ್ರತಿವಾದಿಯ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದ ವಿಚಾರ ನನಗೆ ಗೊತ್ತಿಲ್ಲ. 12 ನೇ ಪ್ರತಿವಾದಿಯು 4 ನೇ ಪ್ರತಿವಾದಿಯ ಗಂಡ ಸೋಮಶೇಖರರವರ ಮೇಲೆ ದಾವೆ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರಿಕೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಪರವಾಗಿ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿದೆ, ಆ ದಾಖಲೆಗಳು ಏನೆಲ್ಲಾ ಎಂದು ನನ್ನಿಂದ ಹೇಳಲು ಸಾಧ್ಯವಿಲ್ಲ. ಪ್ರಮಾಣ ಪತ್ರಿಕೆಯಲ್ಲಿರುವ ಹೆಬ್ಬೆಟ್ಟನ್ನು ವಕೀಲರ ಕಚೇರಿಯಲ್ಲಿ ಹಾಕಿದ್ದೇನೆ. ನನ್ನ ಪ್ರಮಾಣ ಪತ್ರಿಕೆಯನ್ನು 1 ನೇ ವಾದಿಯ ಪರ ವಕೀಲರು ತಯಾರಿಸಿದ್ದಾರೆ ಎಂದರೆ ಸರಿ. 1 ನೇ ವಾದಿಯ ಮಗನಾದ 2 ನೇ ಪ್ರತಿವಾದಿಯ ಮಗನನ್ನು ನಾನು ಈಗ್ಗೆ 14 ವರ್ಷಗಳ ಹಿಂದೆ ದತ್ತು ತೆಗೆದುಕೊಂಡಿದ್ದೇನೆ. 1 ನೇ ವಾದಿಗೆ ಒಬ್ಬ ಗಂಡು ಮಗ, ಒಬ್ಬ ಹೆಣ್ಣು ಮಗಳು. 1 ನೇ ವಾದಿಗೆ ಇದ್ದ ಮಗನನ್ನು ನನಗೆ ದತ್ತು ಕೊಟ್ಟಿರುವುದರಿಂದ ಅವರಿಗೆ ಬೇರೆ ಗಂಡು ಮಕ್ಕಳು ಇಲ್ಲ. ನಾನು 2 ನೇ ಪ್ರತಿವಾದಿಯನ್ನು ದತ್ತು ತೆಗೆದುಕೊಂಡಿದ್ದಾಗ ಆತನಿಗೆ 19 ವರ್ಷ ವಯಸ್ಸಾಗಿತ್ತು. ದತ್ತು

ತೆಗೆದುಕೊಳ್ಳುವ ಪೂರ್ವದಲ್ಲಿ ನಾವು ಪಂಚಾಯತಿ ಮಾಡಿರುವುದಿಲ್ಲ. 1 ನೇ ವಾದಿಯನ್ನು ದತ್ತು ಕೊಡಬೇಕೆಂದು ನಾವು ಕೇಳಿದ್ದೇವೆ. 1 ನೇ ವಾದಿಯಿಂದ ದತ್ತು ತೆಗೆದುಕೊಳ್ಳುವ ಸಂದರ್ಭದಲ್ಲಿ ಯಾವುದೇ ಬರವಣಿಗೆ ಮಾಡಿಸಿಕೊಂಡಿಲ್ಲ. ನಿ.ಡಿ. 55 ರಲ್ಲಿ ಬರೆದಿರುವಂತೆ ದತ್ತು ತೆಗೆದುಕೊಳ್ಳುವ ಪೂರ್ವದಲ್ಲಿ ಪಂಚಾಯತಿ ಮಾಡಿದ್ದೇವೆ ಎಂದು ಹೇಳಿರುವ ವಿಚಾರ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 63/1 ರ 18 ಗುಂಟೆ ವಿಸ್ತೀರ್ಣಕ್ಕೆ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಹೊಳೆನರಸೀಪುರದಲ್ಲಿ ಒ.ಎಸ್. 199/10 ಈ ದಾವೆಯ ವಾದಿಗಳ ವಿರುದ್ಧ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. 1 ನೇ ವಾದಿಯು ಒ.ಎಸ್. 199/10 ರಲ್ಲಿ ನನ್ನ ಪರವಾಗಿಯೂ ಸಾಕ್ಷಿ ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿ 13 ರಿಂದ 16 ರವರ ಹೆಸರಿಗೆ ಒಟ್ಟು ಕುಟುಂಬದ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರವನ್ನು ಹೇಳಲು ನನಗೆ ತೊಂದರೆ ಇಲ್ಲ. ನಮ್ಮ ಒಟ್ಟು ಕುಟುಂಬದ ಆಸ್ತಿಯನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡು, ನಂತರ ಮಾರಾಟ ಮಾಡಿರುವುದನ್ನು 12 ರಿಂದ 16 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುವ ವಿಚಾರವನ್ನು ಹೇಳಿಲ್ಲ ಎಂದರೆ ಸರಿ. ಸರ್ವೆ ನಂಬರ್ 63/1 ರಲ್ಲಿ 1 ಎಕರೆ 15 ಗುಂಟೆ ವಿಸ್ತೀರ್ಣದಲ್ಲಿ 12 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. 12 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 63/1 ರ ಕಂದಾಯ ದಾಖಲಾತಿಗಳು ಇರುವುದು ನನಗೆ ಗೊತ್ತಿಲ್ಲ. ನಾನು ವಾದಿಯೊಂದಿಗೆ ಸೇರಿಕೊಂಡು 12 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ದಾವೆ ಸಲ್ಲಿಸಿ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆ ವಿಚಾರ ರಾಣಿಗೆ ಗೊತ್ತು ಎಂದು ಹೇಳುತ್ತಾರೆ. 1 ನೇ ವಾದಿಯು ಈ ದಾವೆಯನ್ನು ತನ್ನ ಮಾವ ಶಿವರಾಜನ ಜಮೀನು ಬರಬೇಕೆಂದು ಹಾಕಿದ್ದಾರೆ. ಶಿವರಾಜುರವರ ಭಾಗದಲ್ಲಿ ಜಮೀನು ಬರಬೇಕೆಂದು ಹಾಕಿದ್ದಾರೆ. 1 ನೇ ವಾದಿಯು ನನ್ನ ಮೇಲೆ ದಾವೆ ಹಾಕಿಲ್ಲ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.